ತಲೆಗೂದಲಿಂದ ನೀರು ಸೋರುತ್ತಿದೆ. ಈ ಮಳೆಯು ಮುಗಿಲಿಂದಲಾ? ಆಕೆಯ ಮುಡಿಯಿಂದಲಾ?

ನಾನು ಕೂಡ ಪೂರ್ತಿಯಾಗಿ ತೊಯ್ದುಹೋಗಿದ್ದೇನೆ. ತೊಯ್ದು ತೊಪ್ಪೆಯಾಗಿದ್ದೇನೆ. ನಿಂತನಿಲುವಿನಲ್ಲೇ ಜಲಾಭಿಷೇಕ ಮಾಡಿಸಿಕೊಂಡಿದ್ದೇನೆ.

ಮನೆಗೆ ಬಂದು, ಸ್ನಾನ ಮಾಡಿ, ಬಟ್ಟೆ ಬದಲಾ ಯಿಸಿ, ಬಿಸಿ ಬಿಸಿ ಚಹಾವನ್ನು ಹೀರುತ್ತಾ, ಕಿಟಕಿಯ ಪಕ್ಕ ನಿಂತು ಮಳೆಯನ್ನು ಮತ್ತೊಂದು ದೃಷ್ಟಿಕೋನದಿಂದ ದರ್ಶಿಸುತ್ತಾ...

ಇದು ಋಷಿಗಳು ಸುರಿಸಿದ ಕಣ್ಣೀರಾಗಿರಬಹುದು. ನಮ್ಮ ತಾತ ಮುತ್ತಾತಂದಿರ ಆನಂದ ಬಾಷ್ಪಗಳಾಗಿರಬಹುದು. ಶ್ರಮದೇವತೆಗಳ ಬೆವರ ಹನಿಗಳಾಗಿರಬಹುದು. ಭೂಮ್ಯಾಕಾಶಗಳ ಸಂಗಮದಿಂದ ಹುಟ್ಟಿದ್ದಾಗಿರಬಹುದು. ಇದು ಬಣ್ಣ, ರುಚಿ, ವಾಸನೆಗಳಿಲ್ಲದ ಒಂದು ಮಾಮೂಲಿ ದ್ರವ ಪದಾರ್ಥವೂ ಆಗಿರಬಹುದು...

ಅದೇನೇ ಆಗಿದ್ದರೂ...

ಇದು ಕುಂಟೆ. ಇದು ಕೆರೆ. ಇದು ನದಿ. ಇದು ಸಮುದ್ರ. ಇದು ಹಾಡು. ಇದು ಕಾಡು. ಇದು ನೃತ್ಯ. ಇದು ಮರ್ತ್ಯ. ಇದು ನವಿಲು. ಇದು ಕಮಲ. ಇದು ಮಣ್ಣು. ಇದು ಹಣ್ಣು. ಇದು ಹೈನು. ಇದು ಪೈರು. ಇದು ಹಗಲು. ಇದು ಇರುಳು. ಇದು ಹುಟ್ಟು. ಇದು ಸಾವು. ಇದು ಕೆಸರು. ಇದು ತೆಮರು. ಇದು ಅಮೃತ. ಇದು ವರ್ಷ. ಇದು ಹರ್ಷ. ಇದು ಸಮಸ್ತ!


## ಪೂಡೂರಿ ರಾಜಿರೆಡ್ಡಿ

ತೆಲಂಗಾಣದ ಕರೀಂನಗರ್ ಜಿಲ್ಲೆಯ ನರ್ಸಿಂಗಾಪುರಂ ಗ್ರಾಮದವರು. ವೃತ್ತಿಯಿಂದ ಪತ್ರಕರ್ತರು. ಪ್ರಸ್ತುತ ತೆಲುಗಿನ 'ಸಾಕ್ಷಿ' ದಿನಪತ್ರಿಕೆಯ ಸಾಹಿತ್ಯ ಪುರವಣಿಯ ಜವಾಬ್ದಾರಿ ಹೊತ್ತಿದ್ದಾರೆ. 'ಮಧುಪಂ', 'ಪಲಕಪೆನ್ಸಿಲ್', 'ರಿಯಾಲಿಟಿ ಚೆಕ್' ಇವರ ಈವರೆಗಿನ ಪ್ರಕಟಿತ ಕೃತಿಗಳು. ತೆಲುಗಿನ ಸಮಕಾಲೀನ ಲೇಖಕರಲ್ಲಿ ಕಾವ್ಯಾತ್ಮಕ ಭಾಷೆಯ ವಿಶಿಷ್ಟ ಕತೆಗಾರರಾಗಿ ಗುರುತಿಸಿಕೊಂಡಿದ್ದಾರೆ.

## ಜಗದೀಶ್ ಚಂದ್ರ ಬಾಗಲಿ

ಮೂಲತಃ ರಾಯಚೂರು ಜಿಲ್ಲೆಯವರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ವೃತ್ತಿಯಿಂದ ಬಿಲ್ಡರ್. ತೆಲುಗಿನಲ್ಲಿ 'ಅತಡು, ಆಮೆ ಓ ಸ್ಕೂಟರ್' ಎಂಬ ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ಮಾಣವನ್ನೂ ಮಾಡಿದ್ದಾರೆ. ಪ್ರವಾಸ ಮತ್ತು ಫೋಟೋಗ್ರಫಿ ಇವರ ಇತರೆ ಆಸಕ್ತಿಯ ಕ್ಷೇತ್ರಗಳು. 'ಮಾಯದ ಹಡಗು' ಎಂಬ ಪ್ರವಾಸ ಕಥನ ಪ್ರಕಟವಾಗಲಿದೆ. ಹಲವಾರು ಕಥೆಗಳನ್ನು ತೆಲುಗಿನಿಂದ ಅನುವಾದಿಸಿದ್ದಾರೆ.